# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ವಿಶೇಷ ಮೊಕದ್ದಮೆ ಸಂಖ್ಯೆ. 463 /2022

P.W: 1
C.W: 1

**ದಿನಾಂಕ 19.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಮೋಹನ್ ಕುಮಾರ್ ಟಿ .ಜಿ.

**ತಂದೆಯ ಹೆಸರು :** ವೈ.ಜಿ. ಗಂಗಾಧರಯ್ಯ

**ವಯಸ್ಸು** : 45 ವರ್ಷ

**ವೃತ್ತಿ** : ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್, ಬೆಸ್ಕಾಂ , ಕೆಂಗೇರಿ

**ವಾಸಸ್ಥಳ** : ಕೆಂಗೇರಿ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2019 ರಿಂದ 2021 ರವರೆಗೆ ನಾನು ಬೆಸ್ಕಾಂ ಜಾಗೃತ ದಳ, ತುಮಕೂರಿನಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿ.24.09.2019 ರಂದು ಬೆಸ್ಕಾಂ ಜಾಗೃತದಳದ ಪೋಲೀಸ್ ಇನ್ಸ್ ಪೆಕ್ಟರ್ ಚಾ.ಸಾ.8 ಮತ್ತು ನಮ್ಮ ಸಿಬ್ಬಂದಿ ಮಾರ್ಗದಾಳು ಲಕ್ಷ್ಮಣ್ ಮತ್ತು ನಾನು ತುಮಕೂರಿನ ಗಾಂಧಿನಗರದ 1 ನೇ ಆರೋಪಿ ನಡೆಸುತ್ತಿದ್ದ

ಮಹಿಳಾ ಪಿ.ಜಿ.ಗೆ ಬೇಟಿ ನೀಡಿದ್ದೆವು. ಸದರಿ ಕಟ್ಟಡ 2 ನೇ ಆರೋಪಿಯ ಮಾಲೀಕತ್ವಕ್ಕೆ ಸೇರಿರುತ್ತದೆ. ಕಟ್ಟಡವನ್ನು ಪರೀಲಿಸಿದಾಗ ಕಟ್ಟಡದಲ್ಲಿ ಹಲವು ರೂಂಗಳು ಇದ್ದವು. ರೂಂ ನಲ್ಲಿ ಮಹಿಳೆಯರು ಇದ್ದರು. ಕಟ್ಟಡದಲ್ಲಿದ್ದ ಅಡಿಗೆ ಭಟ್ಟರು ಕರಿಬಸವಯ್ಯರವರನ್ನು ವಿಚಾರಿಸಿದೆವು. ಕರಿಬಸವಯರವರು 1 ನೇ ಆರೋಪಿ ಪಿಜಿ ನಡೆಸುತ್ತಿದ್ದಾರೆ ಎಂದು ತಿಳಿಸಿದರು. ಕೂಡಲೇ ನಾವು ಕಟ್ಟಡದ ಮುಂಭಾಗದಲ್ಲಿ ಅಳವಡಿಸಿದ್ದ ಮಾಪಕದ ಬಳಿಗೆ ಹೋಗಿ ಪರಿಶೀಲಿಸಿದೆವು. ಎಲ್.ಟಿ.2 ಎ ಜಕಾತಿ ಅಡಿಯಲ್ಲಿ ಗೃಹ ಬಳಕೆ ವಿದ್ಯುತ್ ಸಂಪರ್ಕ ಪಡೆದಿದ್ದರು. ಅದನ್ನು ಪರಿಶೀಲಿಸಿದಾಗ 8 ಕಿಲೋವ್ಯಾಟ್ ವಿದ್ಯುತ್ ಸಂಪರ್ಕಕ್ಕೆ ಅನುಮತಿ ಪಡೆ ದಿದ್ದರು. ಸದರಿ ಕಟ್ಟಡಕ್ಕೆ ಗ್ರಾಹಕರು ಗೃಹಬಳಕೆಯ ಎಲ್.ಟಿ.2 ಎ ವಿದ್ಯುತ್ ಸಂಪರ್ಕ ಪಡೆದಿದ್ದರು. ಆದರೆ ಕಟ್ಟಡದಲ್ಲಿ ಪಿಜಿ ನಡೆಸಲು ಬಳಕೆ ಮಾಡುತ್ತಿದ್ದ ವಾಣಿಜ್ಯ ಉದ್ದೇಶಕ್ಕಾಗಿ ಕಟ್ಟಡದ ಬಳಕೆ ಆಗುತ್ತದೆಂದು ಪರಿಶೀಲನೆಯ ವೇಳೆ ಕಂಡು ಬಂತು. ವಾಣಿಜ್ಯ ಉದ್ದೇಶಕ್ಕೆ ಎಲ್.ಟಿ.3 ಜಕಾತಿ ವಿದ್ಯುತ್ ಸಂಪರ್ಕವನ್ನು ಪಡೆಯಬೇಕಾಗಿತ್ತು. ಈ ಬಗ್ಗೆ ಬೆಸ್ಕಾಂ ಜಾಗೃತ ದಳಕ್ಕೆ ನಾನು ದೂರು ಕೊಟ್ಟಿದ್ದೇನೆ. ಸಾಕ್ಷಿ ದಿ.24.09.2019 ರ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಗುರುತು ಮಾಡಲಾಯಿತು. ದೂರನ್ನು 12.00 ರಿಂದ 12.15 ರ ಸಮಯದಲ್ಲಿ ಕೊಟ್ಟಿದ್ದೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಾಕ್ಷಿಯ

ಸಹಿಯನ್ನು ನೋಡಿ ಗುರುತಿಸಿದ್ದು ನಿ.ಪಿ.1(ಎ) ಎಂದು ಗುರುತು ಮಾಡಲಾಯಿತು.

3. ದೂರು ಕೊಟ್ಟ ನಂತರ ನಾನು ಸ್ಥಳದ ಪರಿಶೀಲನೆ ಮಾಡಿದ್ದೇನೆ. ನಾನು ಎಲ್.ಟಿ.2 ಮಾಪಕ ಸಂಖ್ಯೆಯನ್ನು ನಾನು ಕಡತ ನೋಡಿ ಹೇಳಬಲ್ಲೆ. ಸಾಕ್ಷಿ ಕಡತವನ್ನು ನೋಡಿ ಆರ್.ಆರ್.ನಂ.ಎ 18943 ಎಂದು ನುಡಿದಿರುತ್ತಾರೆ. ಮಾಪಕ ಎಲ್ ಅಂಡ್ ಟಿ ಕಂಪನಿಗೆ ಸೇರಿದ್ದು. ಅದರ ಕ್ರಮ ಸಂಖ್ಯೆ 11372578 ಆಗಿದೆ. ಮಹಜರ್ ವೇಳೆ ಸ್ಥಳದಲ್ಲಿದ್ದ ಅಡಿಗೆ ಭಟ್ಟರನ್ನು ವಿಚಾರಿಸಿದಾಗ 2 ನೇ ಆರೋಪಿ ಕಟ್ಟಡದ ಮಾಲೀಕರು ಎಂದು ತಿಳಿದು ಬಂತು.

4. ಪಂಚನಾಮೆಯನ್ನು 12.30 ರಿಂದ 01.30 ರವರೆಗೆ ಅನುಸರಿಸಿದೆವು. ಸಾಕ್ಷಿ ಸ್ಥಳ ಪಂಚನಾಮೆ ಮತ್ತು ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತು ಮಾಡಲಾಯಿತು. ಸ್ಥಳ ಪರಿಶೀಲನೆಯ ನಂತರ ಮಹಿಳಾ ಪಿಜಿ ಆಗಿದ್ದ ಕಾರಣ ವಿದ್ಯುತ್ ಸಂಪರ್ಕ ಕಡಿತಗೊಳಿಸಲಿಲ್ಲ. ಸ್ಥಳ ಪಂಚನಾಮೆಯ ನಂತರ ಸ್ಥಳದಲ್ಲಿ inspection report ತಯಾರು ಮಾಡಿದೆವು. ಸಾಕ್ಷಿ inspection report ಮತ್ತು ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತು ಮಾಡಲಾಯಿತು. ನಿ.ಪಿ.3 ರಲ್ಲಿ ಕಟ್ಟಡದಲ್ಲಿ ಅಡಿಗೆ ಭಟ್ಟರಾಗಿ

ಕೆಲಸ ಮಾಡುತ್ತಿದ್ದ ಕರಿಬಸವಯ್ಯರವರ ಸಹಿಯನ್ನು ಸಹಾ ಪಡೆದಿದ್ದೇನೆ. ಕಟ್ಟಡದ ಅಕ್ಕಪಕ್ಕದವರನ್ನು ವಿಚಾರಿಸಿದಾಗ 2011 ರಿಂದ ಕಟ್ಟಡದಲ್ಲಿ ಮಹಿಳಾ ಪಿಜಿ ನಡೆಸುತ್ತಿರುವ ಬಗ್ಗೆ ಮಾಹಿತಿ ತಿಳಿಯಿತು. ಸದರಿ ಮಾಹಿತಿಯ ಆಧಾರದಲ್ಲಿ ಕಛೇರಿಗೆ ಹಿಂದುರಿಗಿದ ನಂತರ ದಿ.24.09.2016 ರಂದೇ Provisional bill ತಯಾರು ಮಾಡಿದ್ದೆ. ಸಾಕ್ಷಿ Provisional bill ಮತ್ತು ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತು ಮಾಡಲಾಯಿತು. ನಿ.ಪಿ.4 ರ ಕ್ರಮ ಸಂಖ್ಯೆ 6 ರಲ್ಲಿ fixed charges ಅನ್ವಯ 1 ಕಿಲೋ ವ್ಯಾಟ್ ಗೆ 80 ರೂ.ಗಳಂತೆ ಒಟ್ಟು 1 ತಿಂಗಳಿಗೆ 8 ಕಿಲೋವ್ಯಾಟ್ ನಂತೆ, ಒಟ್ಟು 107 ತಿಂಗಳಿಗೆ 2 ಪಟ್ಟು ಹಣದಂತೆ ಒಟ್ಟು ರೂ.1,36,960/- ಗಳನ್ನು ನಿಗಧಿಪಡಿಸಿದ್ದೇನೆ. ( 8 k.w x 80x 107months x 2 times = 1,36,960/-) ಕಲಂ.6, 7 ಮತ್ತು 8 ನ್ನು ಒಟ್ಟಾಗಿ ಪರಿಗಣಿಸಿದಾಗ ರೂ.12,28,872/- ಗಳು Provisional bill ಎಂದು ತಯಾರು ಮಾಡಿದೆವು. ಕ್ರಮ ಸಂಖ್ಯೆ 10 ರಲ್ಲಿ 1 ನೇ ಆರೋಪಿ ಎಲ್.ಟಿ.2 ಅನ್ವಯ ಪಾವತಿ ಮಾಡಿದ ಹಣವನ್ನು ನಮೂದು ಮಾಡಿದ್ದೇವೆ, ಪಾವತಿ ಮಾಡಿದ ರೂ.5,21,017/- ಗಳನ್ನು ಒಟ್ಟು ಹಣ ರೂ.12,28,872/- ರಲ್ಲಿ ಕಡಿತ ಮಾಡಿರುತ್ತೇವೆ. ಕಡಿತವಾದ ನಂತರ back billing charges ಆಗಿ ರೂ.7,07,855/- ಗಳನ್ನು ಆರೋಪಿಗಳು

ಪಾವತಿ ಮಾಡಬೇಕಾಗಿರುತ್ತದೆ. ಕ್ರಮ ಸಂಖ್ಯೆ 12 ರನ್ವಯ ರೂ.64,000/- ಗಳ ರಾಜೀ ಮಾತ್ರವಾಗಿ ಪರಿಗಣಿಸಿರುತ್ತೇವೆ. ಒಟ್ಟು ರೂ.7,71,855/- ಗಳನ್ನು ಆರೋಪಿಗಳು ಪಾವತಿ ಮಾಡಬೇಕಾಗಿರುತ್ತದೆ. ನಿ.ಪಿ.4 ರಂತೆ provisional bill ತಯಾರು ಮಾಡಿದ ನಂತರ ಅಂತಿಮ ಬಿಲ್ ತಯಾರಿಗಾಗಿ ಕಾರ್ಯ ಮತ್ತು ಪಾಲನಾ ವಿಭಾಗಕ್ಕೆ ಕಳುಹಿಸಿದೆವು. ಅಂತಿಮ ಬಿಲ್ ಹಣವನ್ನು ಆರೋಪಿಗಳು ಎಷ್ಟು ಪಾವತಿ ಮಾಡಬೇಕು ಎಂದು ಕಾರ್ಯ ಮತ್ತು ಪಾಲನಾ ವಿಭಾಗದವರು ತಯಾರು ಮಾಡುತ್ತಾರೆ.

5. ನಾನು ಕಟ್ಟಡ ಪರಿಶೀಲನೆ ಮಾಡುವಾಗ ವಿದ್ಯುತ್ ಸಂಪರ್ಕ ಚಾಲನೆಯಲ್ಲಿತ್ತು ಕಟ್ಟಡ ಎಷ್ಟು ಅಂತಸ್ತಿನದ್ದು ಎಂದು ಈಗ ನೆನಪಿಲ್ಲ.

**ಪಾಟೀ ಸವಾಲು 1 ಮತ್ತು 2 ನೇ ಆರೋಪಿ ಪರ ವಕೀಲರಿಂದ**

1 ಮತ್ತು 2 ನೇ ಆರೋಪಿ ಪರ ವಕೀಲರು ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಪ್ರಯತ್ನಿಸುವುದಾಗಿ ನುಡಿದಿರುತ್ತಾರೆ. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.